ಓ ಎಸ್ ನಂ. 5/2015
ಪಿ ಡಬ್ಲ್ಯು 1
ದಿನಾಂಕ 22-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಬಿ ಆರ್ ವಕೀಲರಿಂದಃ

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸಾಕ್ಷಿ ಸ್ವಲ್ಪ ಮಾಹಿತಿ ಇದೆ ಎಂದು ನುಡಿಯುತ್ತಾರೆ. ನಿಪಿ-55 ರ ಎಂ ಆರ್ ನಂ.11/1992-93 ರ ದಾಖಲೆ ಓಬಳಪ್ಪ, ಹನುಮಂತಪ್ಪ, ಸಣ್ಣಗೋವಿಂದಪ್ಪ, ಸಗನೀರಂಗಪ್ಪ ಮತ್ತು ಗೋವಿಂದಪ್ಪರವರು ಮಾಡಿಕೊಂಡ ವಿಭಾಗದ ಮೇಲೆ ಆಗಿರುವ ದಾಖಲೆ ಎಂದರೆ ಸಾಕ್ಷಿ ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ನನ್ನ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ-55 ರ ದಾಖಲೆಯಲ್ಲಿರುವ ಎಲ್ಲಾರೂ ಸಹ ಬದುಕಿದ್ದಾರಾ ಎಂದರೆ ಸಾಕ್ಷಿ ಓಬಳಪ್ಪರವರನ್ನು ಹೊರತು ಪಡಿಸಿ ಬೇರೆ ಎಲ್ಲಾರೂ ಸಹ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ-55 ರ ದಾಖಲೆಯಲ್ಲಿರುವ ಮೃತಪಟ್ಟಿರುವ ಪಕ್ಷಗಾರರು ಅವರ ಜೀವಿತಾವಧಿಯಲ್ಲಾಗಲಿ ಅಥವಾ ಓಬಳಪ್ಪರವರು ಕುಟುಂಬದವರು ಇಲ್ಲಿಯವರೆಗೆ ಸದರಿ ಎಂ ಆರ್ ಆದೇಶವನ್ನು

ಎಲ್ಲಿಯಾದರೂ ಪ್ರಶ್ನೆ ಮಾಡಿದ್ದಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಎಲ್ಲಿ ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿ ಇದೇ ನ್ಯಾಯಾಲಯದಲ್ಲಿ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಹೊರತು ಪಡಿಸಿ ನಿಪಿ-55 ರ ಎಂ ಆರ್ ಆದೇಶವನ್ನು ನಾನು ಎಲ್ಲಿಯೂ ಸಹ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ದಾವಾ ಆಸ್ತಿಗಳ ಪೈಕಿ ಬೀರೂರಿನಲ್ಲಿ ಒಂದು ಸೈಟು ಮಾತ್ರ ಇರುತ್ತದೆ. ಸದರಿ ಸೈಟು ಗೋವಿಂದಪ್ಪರವರ ಹೆಸರಿನಲ್ಲಿದೆ. ಸದರಿ ಗೋವಿಂದಪ್ಪರವರಿಗೆ ಸದರಿ ಸೈಟು ಯಾವ ರೀತಿ ಬಂದಿದೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಯಾರಿಂದ ಯಾವಾಗ ಖರೀದಿಸಿರುತ್ತಾರೆಂದು ನನಗೆ ನೆನಪಿಲ್ಲ. ಸದರಿ ಸೈಟಿನ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ 40x60 ಅಡಿ ಇರಬಹುದು ನನಗೆ ನೆನಪಿಲ್ಲ ದಾಖಲೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಸೈಟನ್ನು ಎಷ್ಟು ಮೊತ್ತಕ್ಕೆ ಕೊಂಡುಕೊಳ್ಳಲಾಗಿದೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ 2 ಲಕ್ಷ ರೂಗಳಿಗೆ ಕೊಂಡುಕೊಂಡಿರುವುದಾಗಿ ನನಗೆ ಹೇಳಿದ್ದರು ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ನನಗೆ ಆ ರೀತಿ ಹೇಳಿರುತ್ತಾರೆ ಎಂದರೆ ಸಾಕ್ಷಿ 2000 ನೇ ಇಸವಿಯ ನಂತರದಲ್ಲಿ ಎಂದು ನುಡಿಯುತ್ತಾರೆ. ಸದರಿ ಸೈಟು ಗೋವಿಂದಪ್ಪರವರ ಹೆಸರಿನಲ್ಲಿರುತ್ತದೆ, ಅದನ್ನು ನಾನು ನೋಡಿರುತ್ತೇನೆ.

ನಿಪಿ-69 ರ ದಾಖಲೆಯಲ್ಲಿ ಕಾಣುತ್ತಿರುವ ಸರ್ವೆ ನಂ.9/5 ರ ಸ್ವತ್ತನ್ನು ಗೋವಿಂದಪ್ಪರವರು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಅವರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಈಗ್ಗೆ 20-25 ವರ್ಷಗಳ ಹಿಂದೆ ಖರೀದಿಸಲಾಗಿದೆ. ಸದರಿ ಸ್ವತ್ತನ್ನು ಯಾರಿಂದ ಖರೀದಿಸಲಾಗಿದೆ ಎಂದರೆ ಸಾಕ್ಷಿ ಕೆಂಚಪ್ಪರವರ ಕಡೆಯಿಂದ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.